**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸ:ಕೇಕ:ಆಡಳತ:ಸೇನಿ: 192 :2020-21                ದಿನಾಂಕ: 26 -03-2021

# ಸುತ್ತೋಲೆ ಸಂಖ್ಯೆ : 1690

ವಿಷಯ: ರಾಜ್ಯ ರಸ್ತೆ ಸಾರಿಗೆ ನಿಗಮಗಳ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ನೌಕರರ ಅಂತರ ನಿಗಮ ವರ್ಗಾವಣೆ ಮಾರ್ಗಸೂಚಿಗಳು.

ಉಲ್ಲೇಖ: 1 ಟಿಡಿ 45 ಟಿಸಿಎಸ್ 2020, ದಿನಾಂಕ: 09-03-2021
2 ಟಿಡಿ 45 ಟಿಸಿಎಸ್ 2020, ದಿನಾಂಕ: 23-03-2021

- - - -

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶಗಳಲ್ಲಿ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ 1950 ರ ಅನುಚ್ಛೇದ 34 ರಲ್ಲಿ ಪ್ರದತ್ತವಾಗಿರುವ ಅಧಿಕಾರದಡಿ ರಾಜ್ಯದ ನಾಲ್ಕೂ ರಸ್ತೆ ಸಾರಿಗೆ ನಿಗಮಗಳ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ನೌಕರರಿಗೆ ಪ್ರತಿ ವರ್ಷ, ವರ್ಷಕ್ಕೆ ಒಂದು ಬಾರಿ ಮಾತ್ರ, ಅಂತರ ನಿಗಮ ಖಾಯಂ ವರ್ಗಾವಣೆಗಾಗಿ **"ರಾಜ್ಯ ಸಾರಿಗೆ ನಿಗಮಗಳ ಅಂತರ ನಿಗಮ ವರ್ಗಾವಣೆ ಮಾರ್ಗಸೂಚಿಗಳು-2021"** ಹೊರಡಿಸಿರುತ್ತದೆ. ಸದರಿ ಮಾರ್ಗಸೂಚಿಗಳನ್ವಯ ಅಂತರ ನಿಗಮ ವರ್ಗಾವಣೆಗೆ ಅರ್ಹ ನೌಕರರುಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

**I. ವರ್ಗಾವಣೆ ಮನವಿಯನ್ನು ಸಲ್ಲಿಸಲು ಬಯಸುವ ನೌಕರರು ಗಮನಿಸಬೇಕಾದ ಅಂಶಗಳು:-**

1. ಖಾಯಂ ನೌಕರರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
2. ಅಂತರ ನಿಗಮಗಳಿಗೆ ವರ್ಗಾವಣೆ ಬಯಸುವ ನೌಕರರು ಮಾತ್ರ ನಿಗಮದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರತಕ್ಕದ್ದು. (ಪರೀಕ್ಷಾರ್ಥ ದಿನಾಂಕದಿಂದ).
3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971 ರ ನಿಯಮಾವಳಿ 23 ರಡಿಯಲ್ಲಿ ಶಿಸ್ತು ಪ್ರಕರಣಗಳು ಬಾಕಿ ಇದ್ದಲ್ಲಿ, ಅಂತಹ ನೌಕರರು ವರ್ಗಾವಣೆಗೆ ಅರ್ಹರಾಗುವುದಿಲ್ಲ.
4. ವರ್ಗಾವಣೆಯನ್ನು ಒಂದು ನಿಗಮದಿಂದ ಮತ್ತೊಂದು ನಿಗಮಕ್ಕೆ ಮಾತ್ರ ಕಲ್ಪಿಸಲಾಗಿದ್ದು, ನೌಕರರು ನಿಗಮವನ್ನು ಮಾತ್ರ ಕೋರಿ ವರ್ಗಾವಣೆ ಅರ್ಜಿ ಸಲ್ಲಿಸುವುದು. ನಿಗಮಕ್ಕೆ ವರ್ಗಾವಣೆಯಾದ ನಂತರ ಆಯಾ ನಿಗಮಗಳು ಅವಶ್ಯಕತೆಗೆ ಅನುಗುಣವಾಗಿ ವಿಭಾಗ/ಕಛೇರಿಗಳಿಗೆ ನಿಯೋಜಿಸುತ್ತವೆ.
5. ನೌಕರರ ಅಂತರ ನಿಗಮ ವರ್ಗಾವಣೆಯು ಶಾಶ್ವತ ವ್ಯವಸ್ಥೆಯಾಗಿದ್ದು, ಒಂದು ಬಾರಿ ವರ್ಗಾವಣೆ ಆದೇಶ ಹೊರಡಿಸಿದ ನಂತರ ಯಾವುದೇ ಕಾರಣಕ್ಕೂ ವರ್ಗಾವಣೆಯನ್ನು ಹಿಂಪಡೆಯಲು /ಬದಲಾಯಿಸಲು ಅವಕಾಶವಿರುವುದಿಲ್ಲ.
6. ವರ್ಗಾವಣೆಗೊಂಡ ನೌಕರರನ್ನು ವರ್ಗಾವಣೆಗೊಂಡ ನಿಗಮದಲ್ಲಿ ಶಾಶ್ವತವಾಗಿ ಸೇವೆಯಲ್ಲಿ ವಿಲೀನಗೊಳಿಸಲಾಗುವುದು. ತತ್ಸಂಬಂದ, ನೌಕರರು ಇಚ್ಛಾಪತ್ರ/ಒಪ್ಪಿಗೆಪತ್ರ ಸಲ್ಲಿಸತಕ್ಕದ್ದು. (ಅನುಬಂಧ 'ಅ' ಮತ್ತು 'ಆ')

. . . 2

Scanned with CamScanner

7. ಈ ಹಿಂದೆ ಅಂತರ ನಿಗಮ ವರ್ಗಾವಣೆ ಅವಕಾಶದಡಿಯಲ್ಲಿ ವರ್ಗಾವಣೆಗೊಂಡಿರುವ ನೌಕರರು ಇತರೆ ಯಾವುದೇ ನಿಗಮಗಳಿಗೆ ವರ್ಗಾವಣೆ ಪಡೆಯಲು ಅವಕಾಶವಿರುವುದಿಲ್ಲ.
8. ನೌಕರರು ವರ್ಗಾವಣೆಗೊಂಡ ನಿಗಮದಲ್ಲಿ ಮಾತ್ರ ನಿಗಮದಲ್ಲಿನ ವೇತನವನ್ನು ಸಂರಕ್ಷಿಸಿ ಮುಂದುವರೆಸಲಾಗುವುದು ಹಾಗೂ ವರ್ಗಾವಣೆಗೊಂಡ ನಿಗಮದಲ್ಲಿನ ಚಾಲ್ತಿಯಲ್ಲಿರುವ ಸೇವಾ ಸೌಲಭ್ಯಗಳಿಗೆ ಅರ್ಹರಾಗುವರು.
9. ನೌಕರರನ್ನು ಕೋರಿಕೆ ಮೇರೆಗೆ ವರ್ಗಾವಣೆ ಮಾಡುವುದರಿಂದ ವರ್ಗಾವಣೆ ಭತ್ಯೆಗೆ ಅರ್ಹರಿರುವುದಿಲ್ಲ.
10. ನಿಗಮದ ನೌಕರರನ್ನು ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಕೋರಿಕೆ ಮೇರೆಗೆ ವರ್ಗಾವಣೆ ಮಾಡಿದಾಗ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಜಾರಿಯಲ್ಲಿರುವ ನೌಕರರ ಸೇವಾ ವರಿಷ್ಠತೆ ನಿಯಮಗಳನ್ವಯ ಜೇಷ್ಠತೆಯನ್ನು ನಿಗದಿಪಡಿಸುವ ರೀತಿಯಲ್ಲಿ ಅಂತರ ನಿಗಮ ವರ್ಗಾವಣೆ ಪ್ರಕರಣದಲ್ಲಿಯೂ ಸಹ ವರ್ಗಾವಣೆಗೊಂಡ ಸಂಸ್ಥೆಯಲ್ಲಿ ಸಂಬಂಧಪಟ್ಟ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಜೇಷ್ಠತಾ ಪಟ್ಟಿಯ ಕೊನೆಯಲ್ಲಿ ಅಂತರ ನಿಗಮಕ್ಕೆ ವರ್ಗಾವಣೆಗೊಂಡ ನೌಕರರ ಜೇಷ್ಠತೆಯನ್ನು ಪರಿಗಣಿಸಲಾಗುವುದು.
11. ಪತಿ–ಪತ್ನಿ ಪ್ರಕರಣಗಳಲ್ಲಿ ವರ್ಗಾವಣೆ ಕೋರುವ ನಿಗಮದ ನೌಕರರ ಪತಿ ಅಥವಾ ಪತ್ನಿಯು ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರದ ಸ್ವಾಮ್ಯದ ಸಂಸ್ಥೆಯ ಅಧಿಕಾರಿ/ನೌಕರರಾಗಿರತಕ್ಕದ್ದು, ಇಂತಹ ಪ್ರಕರಣಗಳಿಗೆ ಅಂತರ ನಿಗಮ ವರ್ಗಾವಣೆಯ ಶೇ5 ರಷ್ಟು ಹುದ್ದೆಗಳನ್ನು ಮೀಸಲಿರಿಸಿದ್ದು, ಅರ್ಜಿ ಸಲ್ಲಿಸುವ ನೌಕರರು ಸಂಬಂಧಪಟ್ಟ ಪ್ರಾಧಿಕಾರದಿಂದ ಸೇವಾ ಪ್ರಮಾಣಪತ್ರ ಪಡೆದು ಸಲ್ಲಿಸತಕ್ಕದ್ದು. ಸದರಿ ಪ್ರಕರಣಗಳಿಗೆ ಕನಿಷ್ಠ 10 ವರ್ಷಗಳ ಸೇವಾವಧಿ ಷರತ್ತಿಗೆ ವಿನಾಯಿತಿ ನೀಡಲಾಗಿದೆ.
12. ಕಲ್ಯಾಣ ಕರ್ನಾಟಕ 371ಜೆ ರಡಿ ವರ್ಗಾವಣೆ ಕೋರುವ ನೌಕರರು ಕಡ್ಡಾಯವಾಗಿ ಸ್ಥಳೀಯ ಅಭ್ಯರ್ಥಿ ಎಂಬ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರ ನೀಡಿರುವ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು. ಕಲ್ಯಾಣ ಕರ್ನಾಟಕ 371ಜೆ ರ ಖಾಲಿ ಹುದ್ದೆಗಳಿಗೆ 371ಜೆ ಸ್ಥಳೀಯ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.
13. ವರ್ಗಾವಣೆಗಾಗಿ ನೌಕರರನ್ನು ಬಿಟ್ಟುಕೊಡುವ ಸಾರಿಗೆ ಸಂಸ್ಥೆಯು (Lending Corporation) ನಿರ್ಧಿಷ್ಠ ವೃಂದದ ಕಾರ್ಯನಿರತ ವೃಂದ ಬಲದ ಗರಿಷ್ಠ ಶೇಕಡ 2 ರಷ್ಟು ಸಿಬ್ಬಂದಿಗಳನ್ನು ಮಾತ್ರ ಉಳಿದ ಸಾರಿಗೆ ಸಂಸ್ಥೆಗಳಿಗೆ ಬಿಟ್ಟುಕೊಡುವುದು ಹಾಗೂ ವರ್ಗಾವಣೆ ಮೂಲಕ ನೌಕರರನ್ನು ಪಡೆಯುವ ಸಂಸ್ಥೆಯು (Receiving Corporation) ಪ್ರತಿ ವರ್ಷ ನೇರ ನೇಮಕಾತಿಗೆ ಲಭ್ಯವಿರುವ ಹುದ್ದೆಗಳ ಶೇಕಡ 75 ರಷ್ಟು ಹುದ್ದೆಗಳಿಗೆ ಹಾಗೂ ಯಾವುದೇ ವೃಂದದ ನೇಮಕಾತಿ ವಿಧಾನವು ಸಂಪೂರ್ಣ ಮುಂಬಡ್ತಿಯಾಗಿದ್ದಲ್ಲಿ ಸದರಿ ವೃಂದದಲ್ಲಿನ ಶೇಕಡ 50 ರಷ್ಟು ಮುಂಬಡ್ತಿ ಖಾಲಿ ಹುದ್ದೆಗಳಿಗೆ ಮಾತ್ರ ಸೀಮಿತಗೊಳಿಸಿ ಪರಿಗಣಿಸಲಾಗುವುದು. ಮತ್ತು ಅಂತರ ನಿಗಮ ವರ್ಗಾವಣೆಯಿಂದ ತೆರವಾಗುವ ಹುದ್ದೆಗಳಿಗೆ ಎದುರಾಗಿ ಮಾತ್ರ ಸೀಮಿತಗೊಳಿಸಿ ಅಂತರ ನಿಗಮ ವರ್ಗಾವಣೆ ಮಾಡಲಾಗುವುದು.

. . . 3

Scanned with CamScanner

14. ಅಂತರ ನಿಗಮ ವರ್ಗಾವಣೆಯನ್ನು ನೌಕರರು ಪ್ರಸ್ತುತ ಹೊಂದಿರುವ ಹುದ್ದೆಯಲ್ಲಿನ ಸೇವಾ ಜ್ಯೇಷ್ಠತೆ ಆಧಾರದ ಮೇಲೆ ವರ್ಗಾವಣೆಗೆ ಪರಿಗಣಿಸಲಾಗುವುದು. (ಪರೀಕ್ಷಾರ್ಥ ದಿನಾಂಕ/ಮುಂಬಡ್ತಿ ದಿನಾಂಕ).
15. ಕರಾರಸಾ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ವಾಕರಸಾಸಂಸ್ಥೆ, ಈಕರಸಾಸಂಸ್ಥೆ ಮತ್ತು ಬೆಂಮಸಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರನ್ನೊಳಗೊಂಡ ಅಧಿಕಾರಯುತ ಸಮಿತಿಯ ಶಿಫಾರಸ್ಸಿನ ಆಧಾರದ ಮೇರೆಗೆ ವರ್ಗಾವಣೆ ಸಮಿತಿಯ ಅಧ್ಯಕ್ಷರು ವರ್ಗಾವಣೆ ಆದೇಶಗಳನ್ನು ಹೊರಡಿಸುವರು.

## II. ಪರಸ್ಪರ ಅಂತರ ನಿಗಮ ವರ್ಗಾವಣೆ:–

1. ಪರಸ್ಪರ ಅಂತರ ನಿಗಮ ವರ್ಗಾವಣೆ ಕೋರುವ ನೌಕರರುಗಳ ಹುದ್ದೆಯು ಒಂದೇ ಆಗಿದ್ದು, ಮತ್ತು ಸದರಿ ನೌಕರರುಗಳ ಮಾಸಿಕ ಮೂಲ ವೇತನ ಹಾಗೂ ತುಟ್ಟಿಭತ್ಯೆ ಆದಷ್ಟು ಮಟ್ಟಿಗೆ ಸಮನಾಗಿರತಕ್ಕದ್ದು, ಅಥವಾ ವ್ಯತ್ಯಾಸವು ಶೇ10ಕ್ಕೆ ಮೀರದಂತೆ ಇದ್ದಲ್ಲಿ ಹಾಗೂ ಸದರಿ ನೌಕರರುಗಳ ಬಾಕಿ ಸೇವಾವಧಿಯು ಆದಷ್ಟು ಮಟ್ಟಿಗೆ ಒಂದೇ ಆಗಿದ್ದಲ್ಲಿ, ಅಂತಹ ನೌಕರರುಗಳನ್ನು ಪರಸ್ಪರ ಅಂತರ ನಿಗಮ ವರ್ಗಾವಣೆಗೆ ಪ್ರತ್ಯೇಕವಾಗಿ ಪರಿಗಣಿಸಲಾಗುವುದು.
2. ಪರಸ್ಪರ ವರ್ಗಾವಣೆಗೆ ಕನಿಷ್ಠ 10 ವರ್ಷ ಸೇವಾವಧಿಯ ಷರತ್ತು ಹಾಗೂ ಖಾಲಿ ಹುದ್ದೆಗಳ ಲಭ್ಯತೆಯ ಷರತ್ತು ಅನ್ವಯಿಸುವುದಿಲ್ಲ.
3. ಉಳಿದಂತೆ ಕೋರಿಕೆ ವರ್ಗಾವಣೆಗೆ ಇರುವ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತದೆ.

## III. ವರ್ಗಾವಣೆ ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಸಲ್ಲಿಸುವ ವಿಧಾನ:–

1. ವರ್ಗಾವಣೆ ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ www.ksrtc.org/transfer ಮೂಲಕ ಸಲ್ಲಿಸತಕ್ಕದ್ದು.
2. ಅರ್ಜಿ ಸಲ್ಲಿಸಲು ಬಯಸುವ ನೌಕರರು ಸೂಚನೆಗಳನ್ನು ಹಾಗೂ ವಿವರಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಆನ್–ಲೈನ್ ನಲ್ಲಿ ಭರ್ತಿ ಮಾಡಿ, ನಿಗದಿತ ನಮೂನೆಯಲ್ಲಿ ಸ್ಕ್ಯಾನ್ ಮಾಡಲಾದ ಸಹಿ ಹಾಗೂ ಇತ್ತೀಚಿನ ಪಾಸ್‌ಪೋರ್ಟ ಅಳತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಅಪ್–ಲೋಡ್ ಮಾಡಿ ಸಲ್ಲಿಸತಕ್ಕದ್ದು.
3. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಿದ ನಂತರ ಮುದ್ರಣ ಪ್ರತಿ ಪಡೆದು, ನಿಗದಿತ ಸ್ಥಳದಲ್ಲಿ ಸಹಿ ಮಾಡಿ ಸಂಬಂಧಿಸಿದ ವಿಭಾಗದ ಸಹಾಯಕ/ಆಡಳಿತಾಧಿಕಾರಿಯವರ ಮುಂದೆ ತಕ್ಷಣವೇ ಖುದ್ದು ಹಾಜರಾಗಿ ಮುದ್ರಿತ ಅರ್ಜಿಯ ಪ್ರತಿಯನ್ನು ಸಲ್ಲಿಸಿ, ಅವರಿಂದ ಸ್ವೀಕೃತಿಯನ್ನು ಪಡೆಯತಕ್ಕದ್ದು. ತಪ್ಪಿದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ನೌಕರರು 371ಜೆ ಹಾಗೂ ಪತಿ–ಪತ್ನಿ ಪ್ರಕರಣದಲ್ಲಿ ಆದ್ಯತೆ ಬಯಸಿದಲ್ಲಿ ಸಂಬಂಧಿಸಿದ ಮೂಲ ಪ್ರಮಾಣ ಪತ್ರಗಳು ಹಾಗೂ ಅವುಗಳ ಒಂದು ಝರಾಕ್ಸ್ ಪ್ರತಿಗಳನ್ನು ವಿಭಾಗದ ಸಹಾಯಕ/ಆಡಳಿತಾಧಿಕಾರಿಯವರಿಗೆ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

. . . 4

Scanned with CamScanner

4. ಸಹಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ವಿಭಾಗದ ಸಹಾಯಕ/ಆಡಳಿತಾಧಿಕಾರಿಯವರಿಗೆ ಪೂರಕ ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ ಮಾತ್ರ ಅರ್ಜಿಗಳನ್ನು ವರ್ಗಾವಣೆಗೆ ಪರಿಗಣಿಸಲಾಗುವುದು.
5. ಒಬ್ಬ ನೌಕರನು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
6. ನೌಕರರು ವರ್ಗಾವಣೆ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ವರ್ಗಾವಣೆಗೆ ಹಕ್ಕು ಹೊಂದಿರುವುದಿಲ್ಲ.

**IV. ವರ್ಗಾವಣೆ ವೇಳಾಪಟ್ಟಿ:-**

1. ವರ್ಗಾವಣೆ ಅರ್ಜಿಯನ್ನು ಸಲ್ಲಿಸಲು 1 ನೇ ಏಪ್ರಿಲ್‌ರಿಂದ 30ನೇ ಏಪ್ರಿಲ್ ರವರೆಗೆ ಅವಕಾಶ ಕಲ್ಪಿಸಲಾಗಿದೆ.
2. ವರ್ಗಾವಣೆ ಅರ್ಜಿಗಳನ್ನು ಸಹಾಯಕ/ಆಡಳಿತಾಧಿಕಾರಿಯವರು ಮೇ 10 ರೊಳಗಾಗಿ ಪರಿಶೀಲಿಸಿ ದೃಢೀಕರಿಸುವುದು.
3. ಅಂತರ ನಿಗಮ ವರ್ಗಾವಣೆಯನ್ನು ಮೇ ತಿಂಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಸರ್ಕಾರದ ಉಲ್ಲೇಖಗಳ ಆದೇಶದಂತೆ ಉಲ್ಲೇಖ-1ರ ಆದೇಶದ ಕ್ರಮ ಸಂಖ್ಯೆ: 5 (vi) ಮತ್ತು 5 (vii) ರಲ್ಲಿನ ನಿರ್ದೇಶನದಂತೆ ಪರಸ್ಪರ ವರ್ಗಾವಣೆಯನ್ನು ಹೊರತುಪಡಿಸಿ, ವರ್ಗಾವಣೆಯಿಂದ ಆಗಬಹುದಾದ ಆರ್ಥಿಕ ಹೊರೆಯನ್ನು ಆಯಾ ನಿಗಮಗಳು ಭರಿಸತಕ್ಕದ್ದು.

ಅಂತರ ನಿಗಮ ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಬಿಟ್ಟುಹೋಗಿರಬಹುದಾದ ಅಂಶಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಅಧಿಕಾರಯುತ ಸಮಿತಿಯು ಅಧಿಕಾರಿ ಹೊಂದಿರುತ್ತದೆ. ಅಧಿಕಾರಯುತ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಸಂಬಂಧಪಟ್ಟವರೆಲ್ಲರೂ ಮೇಲಿನ ಆದೇಶಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

**(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)**
**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿ ಮಾಹಿತಿಗಾಗಿ:**

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ಪತ್ರ ಕಡತ.

Scanned with CamScanner